ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ: ಸಶಿಅ/ಆಕ್ಸಸ್/ಹೊ.ಶಾಲೆ–8ನೇ.ಸೇ/ಕಂ.ಸಂ.6016/10–11 ದಿನಾಂಕ: 15–06–2012

# ಸುತ್ತೋಲೆ

ವಿಷಯ: 8ನೇ ತರಗತಿಗೆ ಉನ್ನತೀಕರಿಸಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಟಿ.ಜಿ.ಟಿ ಶಿಕ್ಷಕರ ಸೇವೆಯನ್ನು ಅವಶ್ಯಕ ಶಾಲೆಗಳಿಗೆ ಒದಗಿಸುವ ಬಗ್ಗೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉನ್ನತೀಕರಿಸಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಟಿ.ಜಿ.ಟಿ (ಪಿ.ಸಿ.ಎಂ) ಶಿಕ್ಷಕರನ್ನು ನೇಮಿಸಲಾಗಿರುತ್ತದೆ. ಉನ್ನತೀಕರಿಸಿರುವ ಶಾಲೆಗಳಲ್ಲಿ ಮಕ್ಕಳ ಕೊರತೆಯಿಂದ 8ನೇ ತರಗತಿಯು ನಡೆಯುತ್ತಿಲ್ಲದ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಟಿ.ಜಿ.ಟಿ(ಪಿ.ಸಿ.ಎಂ) ಶಿಕ್ಷಕರ ಸೇವೆಯನ್ನು ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಬಳಸಿಕೊಳ್ಳಬೇಕಾಗಿರುತ್ತದೆ. ಶಿಕ್ಷಕರ ವರ್ಗಾವಣೆ ಕಾರ್ಯವನ್ನು ಪೂರ್ಣಗೊಂಡ ನಂತರ ಶಿಕ್ಷಕರ ಕೊರತೆ ಇರುವ ಶಾಲೆಗಳ ಪಟ್ಟಿ ಸಿದ್ಧಪಡಿಸಿಕೊಂಡು ಕೆಳಗಿನಂತೆ ಕ್ರಮ ವಹಿಸುವುದು. ಹಲವಾರು ಪ್ರಕರಣಗಳಲ್ಲಿ ಟಿ.ಜಿ.ಟಿ ಶಿಕ್ಷಕರನ್ನು ಪ್ರಾಥಮಿಕ (1–5) ತರಗತಿಯಿರುವ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಯಾವುದೇ ಸಂದರ್ಭದಲ್ಲಿ ಇಂತಹ ವ್ಯವಸ್ಥೆಗೆ ಅವಕಾಶ ನೀಡದೆ ತುರ್ತಾಗಿ ಅವರನ್ನು 8ನೇ ತರಗತಿಯಿರುವ ಶಾಲೆಗಳಿಗೆ Re-deploy ಮಾಡಬೇಕು ಅಥವಾ ನಿಯೋಜಿಸಬೇಕು.

1. ಟಿ.ಜಿ.ಟಿ ಶಿಕ್ಷಕರು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಬ್ಲಾಕ್‌ಗಳಲ್ಲಿ ಆರ.ಟಿ.ಇ ಅಡಿಯಲ್ಲಿ 8ನೇ ತರಗತಿ ಪ್ರಾರಂಭಿಸಿರುವ ಶಾಲೆಗಳಲ್ಲಿ ಸದರಿ ಶಿಕ್ಷಕರನ್ನು ನಿಯೋಜಿಸುವುದು
2. ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲದ ಪಕ್ಷದಲ್ಲಿ ಅಕ್ಕಪಕ್ಕದ ತಾಲ್ಲೂಕಿನಲ್ಲಿ ಅಥವಾ ಜಿಲ್ಲೆಯೊಳಗಿನ ಶಾಲೆಗಳಿಗೆ ನಿಯೋಜನೆ ಮಾಡಬೇಕಾಗಿರುತ್ತದೆ.

ಈ ಪ್ರಕ್ರಿಯೆಯು ದಿನಾಂಕ: 30–06–2012ರೊಳಗೆ ಪೂರ್ಣಗೊಳಿಸುವುದು. ಶಿಕ್ಷಕರ ಹಾಜರಾತಿಯನ್ನು ಸಂಬಂಧಿಸಿದ ಶಾಲೆಯಿಂದ ಪ್ರತಿ ತಿಂಗಳು ಪಡೆದು ಮೂಲ ಶಾಲೆಯಲ್ಲಿಯೇ/ಬಿ.ಇ.ಒ ಕಛೇರಿಯಲ್ಲಿ ವೇತನವನ್ನು ಪಾವತಿಸಲು ಕ್ರಮವಹಿಸುವುದು. ಪ್ರತಿ ಜಿಲ್ಲೆಯಲ್ಲಿ ಈ ಸಂಬಂಧ ಕ್ರಮ ವಹಿಸಿರುವ ಬಗ್ಗೆ ಈ ಕಛೇರಿಗೆ ದಿನಾಂಕ 05–07–2012ರೊಳಗೆ ಕೆಳಗೆ ನಮೂದಿಸಿರುವ ನಮೂನೆಯಲ್ಲಿ ಮಾಹಿತಿ ಒದಗಿಸಲು ತಿಳಿಸಿದೆ.

**ಟಿ.ಜಿ.ಟಿ ಶಿಕ್ಷಕರನ್ನು ಬೇರೆ ಶಾಲೆಗಳಿಗೆ ನಿಯೋಜನೆ ಮಾಡಿರುವ ಬಗ್ಗೆ ವಿವರ :**

ಜಿಲ್ಲೆ: ______________

| ಕ್ರ. ಸಂ | ತಾಲ್ಲೂಕು | ಟಿ.ಜಿ.ಟ ಶಿಕ್ಷಕರ ಹೆಸರು ಹಾಗೂ ಕೆ.ಜಿ.ಐ.ಡಿ ಸಂಖ್ಯೆ | ಟಿ.ಜಿ.ಟಿ ಶಿಕ್ಷಕರು ಹಾಲಿ ಕಾರ್ಯನಿರ್ವಹಿಸುತ್ತಿರುವ ಶಾಲೆಯ ಹೆಸರು ಹಾಗೂ ವಿಳಾಸ | ಟಿ.ಜಿ.ಟಿ ಶಿಕ್ಷಕರು ಹಾಲಿ ಕಾರ್ಯನಿರ್ವಹಿಸುತ್ತಿರುವ ಶಾಲೆಯಲ್ಲಿರುವ ಮಕ್ಕಳ ಸಂಖ್ಯೆ | ಟಿ.ಜಿ.ಟ ಶಿಕ್ಷಕರನ್ನು ನಿಯೋಜನೆ ಮಾಡಿರುವ ಶಾಲೆಯ ಹೆಸರು ಹಾಗೂ ವಿಳಾಸ | ನಿಯೋಜನೆ ಮಾಡಿರುವ ಶಾಲೆಯಲ್ಲಿರುವ ಮಕ್ಕಳ ಸಂಖ್ಯೆ | ಷರಾ |
|---|---|---|---|---|---|---|---|
| | | | | | | | |
| | | | | | | | |

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ.

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಡಿ.ಡಿ.ಪಿ.ಐ ಹಾಗೂ ಡಿ.ವೈ.ಪಿ.ಸಿ ಇವರಿಗೆ ಅಗತ್ಯ ಕ್ರಮಕ್ಕಾಗಿ,
2. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕಛೇರಿ ಪ್ರತಿ.

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA